ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560 001**

ಸಂಖ್ಯೆ:ಸಿ4(2)ಪ್ರೌ.ಶಾ.ಸ.ಶಿ.ಜೇ.ಪಟ್ಟಿ/01/2021-22 ದಿನಾಂಕ:12.07.2022

**ಅಧಿಸೂಚನೆ**

ವಿಷಯ: ದಿನಾಂಕ:01.01.2021ರಲ್ಲಿ ಇದ್ದಂತೆ ಬೆಂಗಳೂರು ವಿಭಾಗದ ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರು-2 ರವರ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ:1. ಸರ್ಕಾರದ ಆದೇಶ ಸಂಖ್ಯೆ:ಇಡಿ 152 ಎಲ್ ಬಿ ಪಿ 2014 ದಿನಾಂಕ:20.05.2014

2 ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಸಿ4(2)ಪ್ರೌ.ಶಾ.ಸ.ಶಿ.ಜೇ. ಪಟ್ಟಿ/01/ 2021-22 ದಿನಾಂಕ: 24.06.2022

3. ಬೆಂಗಳೂರು ವಿಭಾಗದ ಸಹ ನಿರ್ದೇಶಕರ ಪತ್ರದ ಸಂಖ್ಯೆ: ಸನಿ1/ಅ1/ಜೇಷ್ಠತಾ ಪಟ್ಟಿ-1/2021-22 ದಿನಾಂಕ:11.07.2022

4. ಮಾನ್ಯ ಕೆ.ಎ.ಟಿ. ದಾವೆ ಸಂಖ್ಯೆ: 1153 & 1164/2020 ದಿನಾಂಕ: 07.09.2021

5. ಸರ್ಕಾರದ ಆದೇಶ ಸಂಖ್ಯೆ: ಇಡಿ 78 ಎಲ್‌ಬಿಪಿ 2021 ದಿನಾಂಕ; 10.12.2021

6. ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಪಿಟಿಷನ್ ನಂ: 6572/2022 ದಿನಾಂಕ:28.03.022

&&&&&&

ಉಲ್ಲೇಖ(1) ರ ಸರ್ಕಾರದ ಆದೇಶದನ್ವಯ ಬೆಂಗಳೂರು ಮತ್ತು ಮೈಸೂರು ವಿಭಾಗದ ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರ ಗ್ರೇಡ್-2 ರವರ ಮೆರಿಟ್ ಆಧರಿಸಿದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಉಲ್ಲೇಖ (2) ರಲ್ಲಿ ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು. ಉಲ್ಲೇಖ(2)ರಲ್ಲಿ ಪ್ರಸ್ತಾಪಿಸಿದಂತೆ ಸಲ್ಲಿಕೆಯಾಗಿರುವ ಎಲ್ಲಾ ಆಕ್ಷೇಪಣೆಗಳನ್ನು ಜಿಲ್ಲಾ ಉಪನಿರ್ದೇಶಕರು ಪರಿಶೀಲಿಸಿ ದೃಢೀಕರಿಸಿದ ನಂತರ ವಿಭಾಗೀಯ ಸಹ ನಿರ್ದೇಶಕರು ಸೂಕ್ತ ತಿದ್ದುಪಡಿಗಳೊಂದಿಗೆ ಉಲ್ಲೇಖ(3)ರನ್ವಯ ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಿಸುವ ಸಲುವಾಗಿ ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದಿಂದ ಪ್ರೌಢಶಾಲಾ ಸಹ ಶಿಕ್ಷಕರ ವೃಂದಕ್ಕೆ ಬಡ್ತಿ ಹೊಂದಿದ ಶಿಕ್ಷಕರಿಗೆ ಅವರುಗಳು ಕರ್ತವ್ಯಕ್ಕೆ ಹಾಜರಾದ ದಿನಾಂಕವನ್ನು ಜೇಷ್ಠತೆಗಾಗಿ ಪರಿಗಣಿಸಿದೆ. ಅಂತರಘಟಕ ವರ್ಗಾವಣೆಯಾದ ಶಿಕ್ಷಕರಿಗೆ ಅವರು ಈ ವಿಭಾಗದಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕವನ್ನು ಜೇಷ್ಠತೆಗೆ ಪರಿಗಣಿಸಲಾಗಿದೆ.

ಪ್ರೌಢಶಾಲಾ ಸಹ ಶಿಕ್ಷಕರು ಗ್ರೇಡ್-2 ಇವರು ವಿಭಾಗದಿಂದ ವಿಭಾಗಕ್ಕೆ ವರ್ಗಾವಣೆಯಾಗಿ ಬಂದಿರುವ ಸಹ ಶಿಕ್ಷಕರಗಳು ಉಲ್ಲೇಖ(5)ರಲ್ಲಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ದಾವೆ ಹೂಡಿದ್ದು ಸದರಿ ದಾವೆಗೆ ಮಾನ್ಯ ನ್ಯಾಯಾಲಯವು ದಿನಾಂಕ: 07.09.2021ರಂದು ತೀರ್ಪು ಈ ಕೆಳಕಂಡಂತೆ ನೀಡಿರುತ್ತದೆ.

ಕಂಡಿಕೆ 33ರಲ್ಲಿ, In view of the discussions above, the applications are partially allowed and we direct as follows.

3. There is no infirmity in the preparation of the seniorty lists based on unit of seniority which is revenue division for the cadre of Assistant Master Grade,

4. The challenge to the preparation of separate seniority lists for Mysore division and Bangalore division is dismissed.

3. The period of service rendered by the applicants 1, 3-5, 7-10 in the unit of seniorty in which they were appointed shall be considered for determination of their seniority in the unit of seniority to which they were transferred and the date of eligibility as in the original unit of seniority shall be considered in the unit of seniority to which they were transferred.

2. The transfer of applicants 2, 6, 11-12 from the unit of seniority in which they were appointed to another unit of seniority is dehors the 2007 Act and is untenable and they are not entitled to the assignment of seiniorty in the other unit of siniority to which they have been transferred which transfers are in violation to the provisions of the Act. They shall be repatriated to the unit of seniority in which they were appointed in the first instance and assigned a posting in their original unit of seniority through counselling. They shall be entitied to assignment of seniority in the original unit of seniority as if they have not been transferred from the said unit of seniority and the period spent in the other unit of seniority to which they were transferrd at their request, shall be considered as period spent of deputation. They shall be entitled to count their period of service rendered in the other unit of seniority which is considered as deputation, for all purposes.

ಉಲ್ಲೇಖ(5)ರ ಸರ್ಕಾರದ ಆದೇಶದಲ್ಲಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ: 1153 ಮತ್ತು 1164/2020ಕ್ಕೆ ದಿನಾಂಕ: 07.09.2021ರಂದು ತೀರ್ಪು ನೀಡಿರುವ ಹಿನ್ನೆಲೆಯಲ್ಲಿ ಸದರಿ ತೀರ್ಪಿನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಲ್ಲಿಸಲು ಸರ್ಕಾರದಿಂದ ಆದೇಶವಾಗಿರುತ್ತದೆ. ಸರ್ಕಾರದ ಆದೇಶದಂತೆ ರಿಟ್ ಪಿಟಿಷನ್ ಸಂಖ್ಯೆ: 5616/2022ನ್ನು ದಾಖಲಿಸಲಾಗಿದೆ. ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ: 1153 ಮತ್ತು 1164/2020ಕ್ಕೆ ದಿನಾಂಕ: 07.09.2021ರಂದು ನೀಡಿರುವ ತೀರ್ಪಿನ ವಿರುದ್ಧ ಉಲ್ಲೇಖ(6)ರಲ್ಲಿ ಶ್ರೀ ರಾಜಣ್ಣ ಎಂ, ಸಹ ಶಿಕ್ಷಕರು, ಮತ್ತು ಇತರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ: 6527/2022 (ಎಸ್.ಕೆಎಟಿ) ದಾಖಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ಮಾನ್ಯ ಕೆ.ಎ.ಟಿ ತೀರ್ಪಿಗೆ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 28.03.2022ರಂದು ಈ ಕೆಳಕಂಡಂತೆ ತಡೆಯಾಜ್ಞೆ ನೀಡಿರುತ್ತದೆ.

Daily Orders: WP: 6527/2022

ORDER There shall be an interim order insofar as direction Nos.3 and 4, paragraph 33 of the impugned order is concerned. production fo certified copies is dispensed with, subject to production of the same within a period fo one week. issue notice. Learned High Court Government pleader accepts notice on behalf of respondent No.1.

ಮಾನ್ಯ ಕೆ.ಎ.ಟಿ. ದಾವೆ ಸಂಖ್ಯೆ: 1153 & 1164/2020 ದಿನಾಂಕ: 07.09.2021ರ ತೀರ್ಪಿಗೆ ಈ ಮೇಲಿನಂತೆ ತಡೆಯಾಜ್ಞೆ ಇರುವುದರಿಂದ ಪ್ರಸ್ತುತ 01.01.2021ರಲ್ಲಿ ಇದ್ದಂತೆ ಪ್ರೌಢ ಶಾಲಾ ಸಹ ಶಿಕ್ಷಕರು ಗ್ರೇಡ್-2 ಇವರ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದೆ.

ಮೆರಿಟ್ ಆಧರಿಸಿ ಜೇಷ್ಠತಾಪಟ್ಟಿಯನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಒಂದೇ ನೇರ ನೇಮಕಾತಿಯಲ್ಲಿ ಆಯ್ಕೆಯಾಗಿದ್ದು ವಿವಿಧ ದಿನಾಂಕಗಳಲ್ಲಿ ಕರ್ತವ್ಯಕ್ಕೆ ಹಾಜರಾಗಿದ್ದರೂ ಸಹ ಮೆರಿಟ್ ಪಟ್ಟಿಯಂತೆ ಸದರಿ ಪಟ್ಟಿಯಲ್ಲಿನ ಎಲ್ಲಾ ಅಭ್ಯರ್ಥಿಗಳಿಗೂ ಒಂದೇ ಅರ್ಹತಾ ದಿನಾಂಕವನ್ನು ಜೇಷ್ಠತೆಗಾಗಿ ಮಾತ್ರ ಪರಿಗಣಿಸಲಾಗಿದೆ. ಆದರೆ ಅವರುಗಳು ವಾಸ್ತವವಾಗಿ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಮಾತ್ರ ವೇತನ ಹಾಗೂ ಭತ್ಯೆಗಳಿಗೆ ಅರ್ಹರಿರುತ್ತಾರೆ.

ದಿನಾಂಕ: 01.01.2015ರಲ್ಲಿ ಇದ್ದಂತೆ ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರ ವೃಂದ ಮತ್ತು ನೇಮಕಾತಿ ನಿಯಮಗಳಂತೆ ಬಿಬಿಎಂಪಿ ವ್ಯಾಪ್ತಿಯ 371ಜೆ ಸ್ಥಳೀಯ ವೃಂದಕ್ಕೆ (8%) ಅಭಿಮತ ನೀಡಿರುವಂತಹ ಶಿಕ್ಷಕರುಗಳ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರತ್ಯೇಕವಾಗಿ ತಯಾರಿಸಿ ದಿನಾಂಕ: 03.03.2016 ರಂದು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಪ್ರಸ್ತುತ ಪ್ರಕಟಿಸಿದ ಪಟ್ಟಿಯು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ರಿಟ್ ಪಿಟಿಷನ್ ಸಂಖ್ಯೆ: 5616/2022 ಮತ್ತು 6527/2022ಗಳ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ. ಈ ಮೇಲೆ ವಿವರಿಸಿರುವಂತೆ ವಿಭಾಗೀಯ ಸಹ ನಿರ್ದೇಶಕರು, ಬೆಂಗಳೂರು ಇವರು ದಿನಾಂಕ: 01.01.2021ರಲ್ಲಿ ಇದ್ದಂತೆ ಅಂತಿಮ ಜೇಷ್ಠತಾ ಪಟ್ಟಿಯನ್ನು ಕರಾರುವಕ್ಕಾಗಿ ಪರಿಶೀಲಿಸಿ ಹಾಗೂ ದೃಢೀಕರಿಸಿ ಸಲ್ಲಿಸಿರುವ ಆಧಾರದಮೇಲೆ ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರ ಗ್ರೇಡ್-2 ರವರ ಮೆರಿಟ್ ಆಧರಿಸಿದ ಅಂತಿಮ ಜೇಷ್ಠತಾ ಪಟ್ಟಿಯನ್ನು ಅನುಮೋದಿಸಿ ಇಲಾಖೆಯ ವೆಬ್ ಸೈಟ್ www.schooleducation.kar.nic.in ನಲ್ಲಿ ಪ್ರಕಟಿಸಲಾಗಿದೆ.

(ಮಾನ್ಯ ಆಯುಕ್ತರ ಆದೇಶದ ಮೇರೆಗೆ)

(ಕೃಷ್ಣಾಜಿ.ಎಸ್.ಕರಿಚಣ್ಣವರ್)
ನಿರ್ದೇಶಕರು (ಪ್ರೌಢ ಶಿಕ್ಷಣ)
ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು

ಇವರಿಗೆ:

1) ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಮಾಹಿತಿಗಾಗಿ
2) ಜಂಟಿ ನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು ರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ
3) ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ವಿಭಾಗದ ರವರಿಗೆ ಮುಂದಿನ ಕ್ರಮಕ್ಕಾಗಿ
4) ಬೆಂಗಳೂರು ವಿಭಾಗದ ಎಲ್ಲಾ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರುಗಳಿಗೆ ಮುಂದಿನ ಕ್ರಮಕ್ಕಾಗಿ
5) ಬೆಂಗಳೂರು ವಿಭಾಗದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ರವರುಗಳಿಗೆ ಮುಂದಿನ ಕ್ರಮಕ್ಕಾಗಿ
6) ಹಿರಿಯ ಸಹಾಯಕ ನಿರ್ದೇಶಕರು(ಇ-ಆಡಳಿತ), ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ಈ ಅಂತಿಮ ಜೇಷ್ಠತಾ ಪಟ್ಟಿಯನ್ನು ಇಲಾಖೆಯ ಅಂತರ್ಜಾಲ www.schooleducation.kar.nic.in ರಲ್ಲಿ ಪ್ರಕಟಿಸಲು ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿದೆ.

d:\2022-23\siniority adhisuchne-01.01.2021.docx